ಟೀವಿಗೆ ಕನೆಕ್ಟ್ ಮಾಡಬಹುದಾ?' ನಾನು 'ಹೌದು' ಅಂದೆ. ಆ ಮಾತು ಹೇಳಬಾರದಿತ್ತು. ಆ ದಿನ ಸಂಜೆ ನಮ್ಮ ಮನೆ ಮಿನಿ ಥಿಯೇಟರ್ ಆಯ್ತು. ಭಜನೆ ಫುಲ್ ಸೌಂಡ್, ಸ್ಕ್ರೀನ್ ದೊಡ್ಡದು. ಪಕ್ಕದ ಮನೆಯವರೂ ಬಂದ್ರು. ನಾನು ಒಂದು ಮೂಲೆಲಿ ಕುಳಿತುಕೊಂಡು ಲ್ಯಾಪ್‌ಟಾಪ್‌ನ್ನೇ ನೋಡ್ತಾ ಅದರ ಜೀವ ಉಳಿಸಿಕೊಳ್ಳೋ ಪ್ರಯತ್ನ. ಭಜನೆ ಮುಗಿದ ಮೇಲೆ ಅಪ್ಪ ಇದು ಚೆನ್ನಾಗಿದೆ. ನಾಳೆ ಮತ್ತೆ ನೋಡೋಣ.

ಆ ಕ್ಷಣದಲ್ಲಿ ನಾಳೆ ಅನ್ನೋ ಪದಕ್ಕೆ ನನಗೆ ಭಯ ಹುಟ್ಟಿತು. ಅಕ್ಕನ ಕೈಗೆ ಲ್ಯಾಪ್‌ಟಾಪ್ ಹೋದ್ರೆ ಮುಗಿತು ಕಥೆ. ಅವಳು ಎಲ್ಲ ಸೆಟ್ಟಿಂಗ್‌ಗಳನ್ನು ಬದಲಾಯಿಸುತ್ತಾಳೆ. ವಾಲ್‌ಪೇಪರ್ ಬದಲಾಗುತ್ತದೆ. ಬ್ರೌಸರ್ ಬದಲಾಗುತ್ತದೆ. ಪಾಸ್‌ವರ್ಡ್ ಕೂಡ! ಒಂದು ದಿನ ಲ್ಯಾಪ್‌ಟಾಪ್ ಆನ್ ಮಾಡಿದ್ರೆ ನನಗೆ ಲಾಗಿನ್ ಆಗಲೇ ಆಗಲಿಲ್ಲ. ಅಕ್ಕಾ, ಪಾಸ್‌ವರ್ಡ್ ಏನು? ಅವಳು ಶಾಂತವಾಗಿ ಹೇಳಿದಳು ನಾನು ಸುರಕ್ಷತೆಗಾಗಿ ಬದಲಾಯಿಸಿದ್ದೀನಿ. ಸುರಕ್ಷತೆ ಯಾರಿಂದ? ನನ್ನಿಂದ. ಒಂದು ರಾತ್ರಿ ಎಲ್ಲರೂ ಮಲಗಿದ ಮೇಲೆ ಲ್ಯಾಪ್‌ಟಾಪ್ ನನ್ನ ಮುಂದೆ ಇತ್ತು. ಅದು ಶಾಂತವಾಗಿತ್ತು. ನಾನೂ ಹಾಗೇ. ಆ ಕ್ಷಣದಲ್ಲಿ ನನಗೆ ಸತ್ಯ ಅರಿವಾಯ್ತು. ಈ ಲ್ಯಾಪ್‌ಟಾಪ್ ನನ್ನ ಕೆಲಸಕ್ಕೆ ಮಾತ್ರ ಅಲ್ಲ. ನಮ್ಮ ಮನೆಯ ನಗುಗಳಿಗೆ, ಜಗಳಗಳಿಗೆ, ಸಂಬಂಧಗಳಿಗೆ ಒಂದು ಕಾರಣ. ನಾನು ಇದನ್ನು ಖರೀದಿಸಿದ್ದೇನೆ. ಆದ್ರೆ ಇದು ನನ್ನೊಬ್ಬನ ಕಥೆ ಅಲ್ಲ. ಇದು ನಮ್ಮ ಕುಟುಂಬದ ಹಾಸ್ಯದ ಮಹಾಕಾವ್ಯ.

ಲ್ಯಾಪ್‌ಟಾಪ್ ನಮ್ಮ ಮನೆಗೆ ಬಂದು ಒಂದು ತಿಂಗಳು ತುಂಬುವ ಹೊತ್ತಿಗೆ ನಾನು ಒಂದು ದೊಡ್ಡ ತಪ್ಪು ಮಾಡಿದೆ. ಒಂದು ದಿನ ಧೈರ್ಯ ಮಾಡಿ ಅದನ್ನು ನನ್ನ ಕೊಠಡಿಗೆ ತೆಗೆದುಕೊಂಡು ಹೋದೆ. ಇಷ್ಟರಲ್ಲೇ ಕಥೆ ಶುರು. ನಾನು ಕೆಲಸ ಮಾಡ್ತಾ ಇದ್ದೆ. ಅಮ್ಮ ಅಡುಗೆ ಮನೆಯಲ್ಲಿ. ಅಪ್ಪ ಹೊರಗೆ. ಅಕ್ಕ ಫೋನ್‌ನಲ್ಲಿ. ಅಷ್ಟರಲ್ಲೇ ಲ್ಯಾಪ್‌ಟಾಪ್ ಸ್ಕ್ರೀನ್ ಒಮ್ಮೆ ಕಪ್ಪಾಯಿತು. ಮತ್ತೆ ಆನ್ ಆಗಲಿಲ್ಲ. ನಾನು ಮೊದಲು ಶಾಂತವಾಗಿದ್ದೆ. ಬ್ಯಾಟರಿ ಖಾಲಿ ಇರಬೇಕು ಅಂತ ಮನಸ್ಸಿಗೆ ಸಮಾಧಾನ. ಚಾರ್ಜರ್ ಹಾಕಿದೆ. ಲೈಟ್ ಬರಲಿಲ್ಲ. ಅಷ್ಟರಲ್ಲೇ ನನ್ನ ಹೃದಯದಲ್ಲಿ ಒಂದು ಸಣ್ಣ ಬೀಪ್ ಶಬ್ದ. ಏನೋ ಆಗಿದೆ! ನಾನು ಸ್ವಲ್ಪ ಜೋರಾಗಿ ಹೇಳಿದೆ ಅಮ್ಮಾ ಲ್ಯಾಪ್‌ಟಾಪ್ ಆನ್ ಆಗ್ತಿಲ್ಲ. ಅಮ್ಮ ತಕ್ಷಣ ಓಡಿ ಬಂದ್ರು ಸ್ಕ್ರೀನ್ ನೋಡಿ ಚಾರ್ಜರ್ ನೋಡಿದರು. ನನ್ನ ಮುಖ ನೋಡಿದರು. ಅವರ ಮೊದಲ ಡೈಲಾಗ್; ನೋಡು ನಿನ್ನಿಂದಲೇ ಏನೋ ಆಯ್ತು. ನಾನು ಇನ್ನೂ ಉತ್ತರ ಕೊಡೋ ಮುಂಚೆ; ಅಪ್ಪ ಮನೆಗೆ ಬಂದರು. ಅಪ್ಪ; ಏನಾಯ್ತು?, ಅಮ್ಮ; ಲ್ಯಾಪ್‌ಟಾಪ್ ಆನ್ ಆಗ್ತಿಲ್ಲ. ಅಪ್ಪ ತೀರ್ಮಾನ ಘೋಷಿಸಿದರು ಇದು ಹೆಚ್ಚು ಬಳಸಿದ್ರೆ ಆಗೋದು. ಅಕ್ಕ ಬಂದು ಹೊಸ ಕೋನದಿಂದ ನೋಡಿ ನೀನು ಏನಾದ್ರೂ ತಪ್ಪು ಸೈಟ್ ಓಪನ್ ಮಾಡಿದ್ದೀಯಾ? ನಾನು ಅರ್ಥ ಮಾಡಿಕೊಂಡೆ ಇದು ತಾಂತ್ರಿಕ ಸಮಸ್ಯೆ ಅಲ್ಲ, ಕುಟುಂಬೀಯ ಆರೋಪ. ಐದು ನಿಮಿಷದಲ್ಲಿ ಲ್ಯಾಪ್‌ಟಾಪ್‌ಗೆ ಹೊಸ ಕಾಯಿಲೆ ಬಂದಿತ್ತು.

ಅಮ್ಮ; ಇದ್ರಲ್ಲಿ ವೈರಸ್ ಅಂದ್ರೆ ನಮಗೂ ಬರ್ತಾ? ಅಪ್ಪ; ಅದಕ್ಕೆ ಇದನ್ನು ಮನೆಗೆ ತಂದುಕೊಂಡ್ರು. ಅಕ್ಕ; ನಾನು ಮೊದಲೇ ಹೇಳಿದ್ದೆ ಇಂಟರ್ನೆಟ್ ಅಪಾಯಕಾರಿ ಅಂತ. ನಾನು ಹೇಳಲು ಪ್ರಯತ್ನಿಸಿದೆ ಇದು ಕಂಪ್ಯೂಟರ್ ವೈರಸ್ ಆದ್ರೆ ಯಾರೂ ಕೇಳಲಿಲ್ಲ. ಅಮ್ಮ ತಕ್ಷಣ ಲ್ಯಾಪ್‌ಟಾಪ್ ಮೇಲೆ ಹೂವು ಹಾಕಿದರು. ಅಪ್ಪ ದೇವರ ಫೋಟೊ ತೋರಿಸಿದರು. ಅವತ್ತು ನನಗೆ ಗೊತ್ತಾಯ್ತು ನಮ್ಮ ಮನೆಯಲ್ಲಿ ತಾಂತ್ರಿಕ ಸಮಸ್ಯೆಗೂ ಆಧ್ಯಾತ್ಮಿಕ ಪರಿಹಾರ ಇದೆ!

ನನ್ನ ಜೀವನದ ಮತ್ತೊಂದು ಯಾತ್ರೆ ಮರುದಿನ ಲ್ಯಾಪ್‌ಟಾಪ್ ಅನ್ನು ಬ್ಯಾಗ್‌ನಲ್ಲಿ ಹಾಕಿಕೊಂಡು ಕೊನೆಗೆ ಸರ್ವೀಸ್ ಸೆಂಟರ್‌ಗೆ ಪ್ರಯಾಣ ಬೆಳೆಸಿದೆ. ಅಪ್ಪ ಕೂಡ ಜೊತೆಗೆ ಬಂದರು. ಅವರಿಗೆ ನನಗಿಂತ ಲ್ಯಾಪ್‌ಟಾಪ್ ಬಗ್ಗೆ ಹೆಚ್ಚು ಕಾಳಜಿ. ಸರ್ವೀಸ್ ಸೆಂಟರ್‌ನಲ್ಲಿ ಟೆಕ್ನೀಷಿಯನ್ ಕೇಳಿದ; ಏನು ಸಮಸ್ಯೆ? ನಾನು ಹೇಳಿದೆ ಆನ್ ಆಗ್ತಿಲ್ಲ. ಅಪ್ಪ ಮಧ್ಯೆ ನುಗ್ಗಿ ಇದು ತುಂಬಾ ಬಳಸಿದ್ದಾರೆ. ಟೆಕ್ನೀಷಿಯನ್ ಲ್ಯಾಪ್‌ಟಾಪ್ ತೆರೆದು ನೋಡಿದ. ಒಂದು ಬಟನ್ ಒತ್ತಿದ ಸ್ಕ್ರೀನ್ ಆನ್ ಆಯ್ತು. ನಾನು ಅಪ್ಪ ಇಂಗು ತಿಂದ ಮಂಗನಂತೆ ಒಬ್ಬರ ಮುಖ ಒಬ್ಬರು ನೋಡಿಕೊಂಡೆವು. ಟೆಕ್ನೀಷಿಯನ್ ಶಾಂತವಾಗಿ ಹೇಳಿದರು ಚಾರ್ಜರ್ ಸರಿ ಹಾಕಿರಲಿಲ್ಲ. ಆ ಕ್ಷಣದಲ್ಲಿ ನನ್ನೊಳಗೆ ಲಜ್ಜೆ, ನಗು, ಕೋಪ ಮೂರೂ ಒಂದೇ ಸಮಯದಲ್ಲಿ! ಮನೆಗೆ ಬಂದ್ಮೇಲೆ ಲ್ಯಾಪ್‌ಟಾಪ್ ಮತ್ತೆ ಆನ್ ಆಗಿದೆ. ಆದ್ರೆ ಮನೆಲಿ ಹೊಸ ನಿಯಮಗಳು ಜಾರಿಗೆ ಬಂದವು. ನಿನ್ನ ಕೊಠಡಿಗೆ ತೆಗೆದುಕೊಂಡು ಹೋಗಬಾರದು, ಒಬ್ಬನೇ ಬಳಸಬಾರದು, ಹಾಳಾದ್ರೆ ನಿನ್ನ ಹೊಣೆ, ನಾನು ಕೇಳಿದೆ ಸರಿಯಾಗಿ ಇದ್ದರೆ? ಉತ್ತರ ಇರಲಿಲ್ಲ.

ಅದೊಂದು ರಾತ್ರಿ ಎಲ್ಲರೂ ಮಲಗಿದ ಮೇಲೆ ಲ್ಯಾಪ್‌ಟಾಪ್ ನನ್ನ ಮುಂದೆ ಇತ್ತು. ಈ ಬಾರಿ ಅದು ಶಾಂತವಾಗಿತ್ತು. ನಾನೂ ಹಾಗೇ. ನಾನು ಯೋಚಿಸಿದೆ. ಈ ಲ್ಯಾಪ್‌ಟಾಪ್ ನನಗೆ ಕೆಲಸ ಕೊಟ್ಟಿಲ್ಲ ಬಹುಶಃ ಆದ್ರೆ ನನಗೆ ಕಥೆ ಕೊಟ್ಟಿದೆ. ನಗು ಕೊಟ್ಟಿದೆ. ಸಹನೆ ಕಲಿಸಿದೆ. ಮತ್ತು ಕುಟುಂಬ ಅಂದ್ರೆ ಏನು ಅನ್ನೋದನ್ನೂ ನೆನಪಿಸಿದೆ. ಒಂದ್ ಕಾಲದಲ್ಲಿ ಏನಾದ್ರೂ ಕೆಡಿಸಿದ್ರೆ ಯಂತ್ರ ಹಾಳಾಗಿದೆ ಅಂತ ಹೇಳ್ತಿದ್ರು. ಇವತ್ತು ಚಾರ್ಜರ್ ಸರಿಯಾಗಿ ಹಾಕಿಲ್ಲ ಅಂದ್ರೆ ಯಂತ್ರ ನಗ್ತಾ ಇರುತ್ತೆ; ಮಾನವ ಮಾತ್ರ ಬೆಪ್ಪನಾಗುತ್ತಾನೆ. ಮೊದಲು ಮನೆಯವರು ಯಂತ್ರಗಳಿಗೆ ಭಯಪಟ್ಟು. ಟೀವಿ ಹೊಸದಾಗಿದ್ದಾಗ ಅಪ್ಪ ರಿಮೋಟ್ ಒತ್ತೋಕೆ ಭಯ. ಅಮ್ಮ ಬೇಡ ಒಮ್ಮೆ ಹಾಳಾದ್ರೆ ಟೀವಿಯೇ ಮಾತನಾಡಲ್ಲ ಅಂತ. ಈಗ ಪರಿಸ್ಥಿತಿ ತಿರುಗಿದೆ. ಯಂತ್ರಗಳು ಶಾಂತ. ನಾವು ಮಾತ್ರ ಗಾಬರಿ. ಮೊಬೈಲ್ ಹ್ಯಾಂಗ್ ಆದ್ರೆ ನಾವೇ ಹ್ಯಾಂಗ್ ಆಗ್ತೀವಿ. ವೈಫೈ ಇಲ್ಲ ಅಂದ್ರೆ ಮನೆಯಲ್ಲಿ ಮೌನ ಯುದ್ಧ ಶುರು.

ಅಪ್ಪ ಒಮ್ಮೆ ಹೇಳಿದರು, 'ನಮ್ಮ ಕಾಲದಲ್ಲಿ ಇವಿಷ್ಟು ತಂತ್ರಜ್ಞಾನ ಇರಲಿಲ್ಲ'. ನಾನು ಕೇಳಿದೆ, 'ಹಾಗಾದ್ರೆ ನೀವು ಹೇಗೆ ಬದುಕಿದ್ರಿ?' ಅಪ್ಪ ಗಂಭೀರವಾಗಿ ಉತ್ತರಿಸಿದರು, 'ನಾವು ಪರಸ್ಪರ ಮಾತಾಡಿಕೊಂಡು ಬದುಕಿದ್ವಿ'. ಅಮ್ಮ ತಕ್ಷಣ ಸೇರಿಸಿದರು, 'ಅದಕ್ಕೆ ಜಾಸ್ತಿ ಜಗಳ ಆಗ್ತಿತ್ತು'. ನನಗೆ ಆಗ ಅರ್ಥ ಆಯ್ತು ತಾಂತ್ರಿಕತೆ ಮಾತಾಡೋ ಅವಶ್ಯಕತೆಯನ್ನು ಕಡಿಮೆ ಮಾಡಿದೆ. ಆದ್ರೆ ಅರ್ಥ ಮಾಡಿಕೊಳ್ಳೋ ಶಕ್ತಿ ಬೆಳೆದಿದೆಯಾ? ಅದು ಇನ್ನೂ ಬಫರಿಂಗ್‌ನಲ್ಲೇ ಇದೆ. ಲ್ಯಾಪ್‌ಟಾಪ್ ಆನ್ ಆದಾಗ ಎಲ್ಲರೂ ನೆಮ್ಮದಿ. ಅದೇ ಆಫ್ ಆದಾಗ ಎಲ್ಲರ ಒಳಗಿನ ಹುಚ್ಚ ಹೊರಗೆ.

ಅಪ್ಪ ಏನು ಆಯ್ತು? ಅಂತ ಕೇಳ್ತಾರೆ. ಅಮ್ಮ ನಾನು ಮೊದಲೇ ಹೇಳಿದ್ದೆ ಅಂತ. ನಾನು ನನ್ನ ತಪ್ಪಲ್ಲ ಅಂತ. ಯಂತ್ರ ಮಾತ್ರ ಮೌನ. ಅದು ತನ್ನ ಕೆಲಸ ಮುಗಿಸಿಕೊಂಡಿದೆ. ನಾವು ಯಂತ್ರಗಳನ್ನ ಸ್ಮಾರ್ಟ್ ಮಾಡ್ತಾ ಹೋದಂತೆ ನಮ್ಮ ತಪ್ಪುಗಳಿಗೆ ಕಾರಣ ಹುಡುಕೋದು ಸುಲಭವಾಯ್ತು. ಚಾರ್ಜರ್, ನೆಟ್‌ವರ್ಕ್, ಅಪ್‌ಡೇಟ್, ಸಿಸ್ಟಂ ಆದ್ರೆ ಜವಾಬ್ದಾರಿ ಅನ್ನೋ ಫೈಲ್ ಇನ್ನೂ ಡೌನ್‌ಲೋಡ್ ಆಗಿಲ್ಲ. ಆ ರಾತ್ರಿ ಲ್ಯಾಪ್‌ಟಾಪ್ ಮುಚ್ಚಿ ನಾನು ಯೋಚಿಸಿದೆ. ಇದು ನನಗೆ ಕೆಲಸ ಕೊಡಲಿಲ್ಲ ಬಹುಶಃ. ಆದ್ರೆ ಒಂದು ಕನ್ನಡಿಯನ್ನಂತೂ ಕೊಟ್ಟಿದೆ. ತಾಂತ್ರಿಕತೆ ಬೆಳೆದಂತೆ ನಾವು ಮೂರ್ಖರಲ್ಲದಿದ್ದರೂ, ನಮ್ಮ ಮೌಢ್ಯ ಮಾತ್ರ ಇನ್ನಷ್ಟು ಸ್ಪಷ್ಟವಾಗಿ ಕಾಣ್ತಿದೆ. ಬಹುಶಃ ನಾವು ಹುಚ್ಚರಾಗಿಲ್ಲ. ನಾವು ಹಾಗೇ ಇದ್ದೀವಿ. ಇನ್ನು ಯಂತ್ರಗಳು ಅದನ್ನ ತೋರಿಸೋಕೆ ಶುರು ಮಾಡಿವೆ ಅಷ್ಟೆ. ಲ್ಯಾಪ್‌ಟಾಪ್ ಶಾಂತವಾಗಿತ್ತು. ಮನೆ ಕೂಡ. ಆ ಮೌನದಲ್ಲಿ ನನಗೆ ಅರ್ಥ ಆಯ್ತು ಕುಟುಂಬ ಅನ್ನೋದು ವೈಫೈ ಅಲ್ಲ. ಸಿಗ್ನಲ್ ಹೋದರೂ ಕಟ್ ಆಗೋದಿಲ್ಲ. ತಾಂತ್ರಿಕತೆ ನಮ್ಮ ಬದುಕಿಗೆ ಬಂದಾಗ ಅದು ಬಾಗಿಲು ತಟ್ಟಲಿಲ್ಲ. ನೇರವಾಗಿ ಒಳಗೆ ಬಂದು ನಾನು ಸಹಾಯಕ್ಕೆ ಬಂದಿದ್ದೇನೆ ಅಂದಿತು. ನಾವು ನಂಬಿದ್ದೆವು. ಮೊದಲು ಅದು ಸಮಯ ಉಳಿಸಿತು. ಮತ್ತೆ ದೂರ ಕಡಿಮೆ ಮಾಡಿತು. ಇನ್ನೂ ನಂತರ ಮಾತು ಕಡಿಮೆ ಮಾಡಿತು. ಒಂದೇ ಮನೆಯಲ್ಲಿದ್ದರೂ ಎಲ್ಲರೂ ತಮ್ಮ ತಮ್ಮ ಸ್ಕ್ರೀನ್ ಒಳಗೆ. ಅಪ್ಪ ನ್ಯೂಸ್ ನೋಡ್ತಿದ್ದಾರೆ. ಅಮ್ಮ ರೆಸಿಪಿ ವಿಡಿಯೊ. ಮಗು ಗೇಮ್. ನಾನು ನೋಟಿಫಿಕೇಶನ್ ಕಾಯ್ತಾ. ಎಲ್ಲರೂ ಕನೆಕ್ಟ್ ಆಗಿದ್ದೇವೆ. ಆದ್ರೆ ಒಬ್ಬರಿಗೊಬ್ಬರು ಅಲ್ಲ.

ಹಳೆಯ ಕಾಲದಲ್ಲಿ ಅಪ್ಪನ ಮೌನಕ್ಕೂ ಅರ್ಥ ಇತ್ತು. ಅಮ್ಮನ ಕಣ್ಣಿನ ನೋಟಕ್ಕೂ ಭಾಷೆ ಇತ್ತು. ಇವತ್ತು ದೃಶ್ಯ ಆದ್ರೂ ಅರ್ಥ ಆಗ್ತಿಲ್ಲ. ತಾಂತ್ರಿಕತೆ ನಮಗೆ ತಕ್ಷಣ ಉತ್ತರ ಕೊಡುವ ಅಭ್ಯಾಸ ಕಲಿಸಿತು. ಆದ್ರೆ ನಿಧಾನವಾಗಿ ಕೇಳೋ ಸಹನೆ ಕಿತ್ತುಕೊಂಡಿತು. ಮೆಸೇಜ್ ಟೈಪ್ ಮಾಡೋದು ಸುಲಭ. ಮುಖ ನೋಡಿ ಮಾತಾಡೋದು ಕಷ್ಟ. ಎಮೋಜಿ ಹಾಕೋದು ಸಿಂಪಲ್. ನಿಜವಾದ ನಗು ತೋರಿಸೋದು ಸಂಕೀರ್ಣ. ನಾವು ಯಂತ್ರಗಳಿಗೆ ಚಾರ್ಜ್ ಬೇಕು ಅನ್ನೋದನ್ನ ಕಲಿತ್ವಿ. ಆದ್ರೆ ಸಂಬಂಧಗಳಿಗೆ ಸಮಯ ಬೇಕು ಅನ್ನೋದನ್ನ